ಸಿ) COMED-K ಹಾಗೂ KRLMP ಪರೀಕ್ಷೆ ನಡೆಯುವಾಗ impersonation ಆಗುವುದನ್ನು ತಡೆಗಟ್ಟಲು, ಪರೀಕ್ಷೆಯ ದಿನ ಸರ್ಕಾರದಿಂದ ಅಧಿಕಾರಿಗಳನ್ನು ಪರಿವೀಕ್ಷಣೆಗಾಗಿ ನಿಯೋಜಿಸಲಾಗಿದೆ.

ಡಿ) RGUHS ಗೆ ಪತ್ರ ಬರೆದು ಪ್ರವೇಶಕ್ಕೆ ಅನುಮತಿ ನೀಡುವಾಗ ಸೀಟುಗಳನ್ನು respective mode of selection ನಿಂದ ತುಂಬಿರುವುದನ್ನು ಖಚಿತಪಡಿಸಿಕೊಳ್ಳಲು ತಿಳಿಸಲಾಗಿದೆ.

ಇ) Monitoring ಸಮಿತಿಯನ್ನು ರಚಿಸಲಾಗಿದ್ದು, consensual agreement ನಂತೆ ಸೀಟುಗಳು ತುಂಬುವುದನ್ನು ಖಚಿತಪಡಿಸಿಕೊಳ್ಳಲಾಗುತ್ತದೆ.

ರಾಜ್ಯದಲ್ಲಿ ಜರುಗಲಿರುವ ಜಾತಿವಾರುಸ ಸಮೀಕ್ಷೆ

190(305); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

1) ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಸರ್ಕಾರ ನಡೆಸುತ್ತಿರುವ ಜಾತಿವಾರು ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯ ಕುರಿತಾದ ಸಿದ್ದತೆಯ ವಿವರಗಳೊಂದಿಗೆ ಅದಕ್ಕೆ ನಿಗಧಿಪಡಿಸಿರುವ ಕಾಲಮಿತಿ ವಿವರಗಳನ್ನು ನೀಡುವುದು;

2) ಜಾತಿವಾರು ಸಮೀಕ್ಷೆ ಜವಾಬ್ದಾರಿಯನ್ನು ನಿರ್ವಹಿಸುವ ಉನ್ನತ ಮಟ್ಟದ ಅಧಿಕಾರಿಗಳು ಮತ್ತು ಅವರ ಕಾರ್ಯವ್ಯಾಪ್ತಿಗಳೇನು (ವಿವರ ನೀಡುವುದು)

3) ರಾಜ್ಯದ ಹಿಂದುಳಿದ ವರ್ಗಗಳ ಆಯೋಗ ನಡೆಸುವ ಸಮಿತಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಿಸುವ ಮತ್ತು ಇದುವರೆವಿಗೂ ಆಯೋಗದ ಸದಸ್ಯತ್ವ ದೊರಕದ ಹಿಂದುಳಿದ ಜಾತಿಗಳ ಅರ್ಹರಿಗೆ ಸದಸ್ಯತ್ವವನ್ನು ನೀಡುವ ಕುರಿತು ಸರ್ಕಾರದ ನಿಲುವುಗಳೇನು ಹಾಗೂ ನೇಮಕಾತಿ ಕುರಿತು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

1)

1) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳನ್ನು ಗುರುತಿಸಲು ಅಗತ್ಯವಾದ ಮಾನದಂಡಗಳ ಆಧಾರದ ಮೇಲೆ ಸಮೀಕ್ಷಾ ನಮೂನೆಗಳನ್ನು ಅಂತಿಮಗೊಳಿಸಿ ಅನುಮೋದನೆ ನೀಡಲಾಗಿದೆ.

2) ಸಮೀಕ್ಷೆಗೆ ಇನ್ನಿತರ ಪೂರ್ವಭಾವಿ ಸಿದ್ಧತೆಗಳ ಜೊತೆಗೆ ಸಮೀಕ್ಷಾ ನಮೂನೆಗಳು ಮತ್ತು ಸಮೀಕ್ಷೆಗೆ ಬಳಸುವ ಜಾತಿಗಳ ಸಂಕೇತ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ದಿನಪತ್ರಿಕೆಗಳ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಣೆ ನೀಡಲಾಗುತ್ತಿದೆ. ಇವುಗಳನ್ನು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಮಹಾನಗರ ಪಾಲಿಕೆಗಳ ಹಾಗೂ ತಾಲ್ಲೂಕು/ಗ್ರಾಮ ಪಂಚಾಯತ್ ಕಛೇರಿಗಳಿಗೆ ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲು ಕಳುಹಿಸಲಾಗುತ್ತಿದೆ.

3) ಸಾರ್ವಜನಿಕರು ಮತ್ತು ವಿವಿಧ ಜಾತಿ/ಸಮುದಾಯಗಳ ಸಂಘ ಸಂಸ್ಥೆಗಳಿಂದ ಜಾತಿಗಳ ಸಂಕೇತ ಪಟ್ಟಿಗೆ ಸೇರ್ಪಡೆ ಮತ್ತು ಮಾರ್ಪಾಡಿಗೆ ಆಕ್ಷೇಪಣೆ/ಸಲಹೆಗಳನ್ನು ಸ್ವೀಕರಿಸಿದ ನಂತರ ಸಮೀಕ್ಷಾ ನಮೂನೆ ಮತ್ತು ಸಂಕೇತ ಪಟ್ಟಿಗಳನ್ನು ಅಂತಿಮಗೊಳಿಸಿ ಮುದ್ರಣಕ್ಕೆ ನೀಡಲಾಗುವುದು.

4) ಮನೆ–ಮನೆ ಸಮೀಕ್ಷಾ ಕಾರ್ಯವನ್ನು ನವೆಂಬರ್/ಡಿಸೆಂಬರ್ 2014ರಲ್ಲಿ ಕೈಗೊಂಡು ಪೂರ್ಣಗೊಳಿಸಲಾಗುವುದು.

2)

ಅ) ರಾಜ್ಯದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯ ಮೇಲ್ವಿಚಾರಣೆಯಲ್ಲಿ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲಾಗುತ್ತದೆ.

ಆ) ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾಧಿಕಾರಿಗಳು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇನ್ನಿತರ ನಗರ ಪಾಲಿಕೆಗಳ ಆಯುಕ್ತರುಗಳನ್ನು ಪ್ರಧಾನ ಸಮೀಕ್ಷಾಧಿಕಾರಿಗಳನ್ನಾಗಿ ನೇಮಕ ಮಾಡಲಾಗುತ್ತಿದ್ದು ಇವರ ಮೇಲ್ವಿಚಾರಣೆಯಲ್ಲಿ ಸಮೀಕ್ಷೆಯನ್ನು ಮಾಡಲಾಗುತ್ತದೆ.

ಇ) ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರ್ ಹಾಗೂ ಮಹಾನಗರ ಪಾಲಿಕೆಗಳ ಕಂದಾಯಾಧಿಕಾರಿಗಳು ಅಥವಾ ಆಯುಕ್ತರಿಂದ ನಿಯೋಜಿಸಲಾಗುವ ಹಿರಿಯ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಮನೆ–ಮನೆ ಸಮೀಕ್ಷಾ ಕಾರ್ಯಚರಣೆ ನಡೆಯಲಿದೆ.

3) ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಕಾಯ್ದೆ 1995ರ ಅನ್ವಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಹಿಂದುಳಿದ ವರ್ಗಗಳ ಆಯೋಗದ ವರದಿಗಳ ಅನುಷ್ಠಾನ

191(306); ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಹಿಂದುಳಿದ ವರ್ಗಗಳ ಆಯೋಗದ ವರದಿಗಳ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; ಒಪ್ಪಿಗೆಗಾಗಿ ಬಾಕಿ ಇರುವ ವರದಿಗಳ ವಿವರಗಳೇನು;

ಆ) ಹಿಂದುಳಿದ ವರ್ಗಗಳ ಆಯೋಗದವರು ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಕೆ ಮಾಡಿದ ನಂತರ ಸರ್ಕಾರ ಕೈಗೊಳ್ಳಬೇಕಾದ ಕಾನೂನು ನಿಯಮಗಳ ವಿವರ ಒದಗಿಸುವುದು;